# ಇಲ್ಲಿ ಕಲಿಯುವುದೇ ಒಂದು ಖುಷಿ..



ನೈಜೀರಿಯಾದಿಂದ ಬಂದ ದೆಬೋರ

ಪಶ್ಚಿಮ ಆಫ್ರಿಕಾದ ನೈಜೀರಿಯಾ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಹಿಂದುಳಿದಿದೆ. ಇಲ್ಲಿನ ಸಾವಿರಾರು ಮಂದಿ ಉದ್ಯೋಗ ಅರಸಿಕೊಂಡೋ, ವಿದ್ಯಾಭ್ಯಾಸಕ್ಕಾಗಿಯೋ, ಉದ್ಯಮ ಆರಂಭಿಸಲೆಂದೋ ಭಾರತಕ್ಕೆ ಬಂದು ನೆಲೆಸಿದ್ದಾರೆ. ಹಲವಾರು ಮಂದಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರುಗಳಲ್ಲಿಯೂ ನೆಲೆ ಊರಿದ್ದಾರೆ. ಶಿಕ್ಷಣಕ್ಕಾಗಿ ಬಂದ ಅನೇಕ ವಿದ್ಯಾರ್ಥಿಗಳು ಮಧ್ಯವರ್ತಿಗಳ ಸಹಾಯದಿಂದ ಬೆಂಗಳೂರಿನ ಅನೇಕ ಕಾಲೇಜುಗಳಲ್ಲಿ ಸೀಟು ಗಿಟ್ಟಿಸಿಕೊಂಡಿದ್ದಾರೆ. ಅಂಥವರ ಪೈಕಿ ದೆಬೋರ ಎಚ್. ಕೂಡ ಒಬ್ಬರು.

ಎರಡನೆ ವರ್ಷದ ಬಿಬಿಎ (ಮೊದಲಿನ ಬಿಬಿಎಂ) ಪದವಿ ತರಗತಿಯಲ್ಲಿ ಕಲಿಯುತ್ತಿರುವ ದೆಬೋರ ಕುಟುಂಬದ ಸದಸ್ಯರು ನೈಜೀರಿಯಾದಲ್ಲೇ ಇದ್ದಾರೆ. ಅಲ್ಲಿ ಉದ್ಯಮ ನಡೆಸುತ್ತಿರುವ ದೆಬೋರ ಅವರ ಹೆತ್ತವರ ಎಂಟು ಜನ ಮಕ್ಕಳಲ್ಲಿ ಇವರು ಏಳನೆಯವರು. ಬೆಂಗಳೂರಿನ ಆಡುಗೋಡಿಯಲ್ಲಿರುವ ಸೈಂಟ್ ಹಾಪ್‌ಕಿನ್ಸ್ ಕಾಲೇಜಿನಲ್ಲಿ ಓದುತ್ತಿರುವ ದೆಬೋರ ಅವರ ಕ್ಲಾಸ್‌ನಲ್ಲಿ ಬಹುಪಾಲು ಮಂದಿ ನೈಜೀರಿಯನ್ನರೇ ಇದ್ದಾರೆ ಅಂತೆ.

ಬಿಡುವಿನ ವೇಳೆಯಲ್ಲಿ ಸಿನಿಮಾ ನೋಡುವುದು, ಪುಸ್ತಕ ಓದುವುದು, ಹಾಡು ಕೇಳುವುದರಲ್ಲಿ ತಲ್ಲೀನರಾಗುವ ದೆಬೋರಗೆ ಇಲ್ಲಿನ ಶಿಕ್ಷಣ ಪದ್ಧತಿ, ಗುಣಮಟ್ಟ, ತರಬೇತಿಯ ವಿಧಾನ, ಕಾಲೇಜು ವಾತಾವರಣ, ಇಲ್ಲಿನ ಸಹಪಾಠಿಗಳ ಸಹಕಾರ, ಉಪನ್ಯಾಸಕರ ಒಡನಾಟ ಎಲ್ಲವೂ ಬಹುವಾಗಿ ಹಿಡಿಸಿದೆಯಂತೆ.

'ನೈಜೀರಿಯಾದಲ್ಲಿ ಶಿಕ್ಷಣ ವ್ಯವಸ್ಥೆ ಸ್ವಲ್ಪವೂ ಚೆನ್ನಾಗಿಲ್ಲ. ಪ್ರತೀ ಮೂರು ತಿಂಗಳಿಗೊಮ್ಮೆ ಮುಷ್ಕರ, ಬಂದ್ ನಡೆಯುತ್ತಲೇ ಇರುತ್ತದೆ. ಮೂರು ವರ್ಷ ಕಲಿಯಬೇಕಾದ ಕೋರ್ಸ್ ಆರು ವರ್ಷ ಕಲಿತರೂ ಮುಗಿಯುವುದೇ ಇಲ್ಲ. ಹೀಗಾಗಿ ನೈಜೀರಿಯಾದಿಂದ ಎಲ್ಲರೂ ಭಾರತಕ್ಕೆ, ಬೆಂಗಳೂರು, ಮೈಸೂರುಗಳಿಗೆ ಶಿಕ್ಷಣಕ್ಕಾಗಿ ಬರುವಂತಾಗಿದೆ. ಇಲ್ಲಿ ಕಾಲೇಜು ಪ್ರವೇಶ ಸಿಗುವುದು ಕೂಡ ಸುಲಭ, ಶಿಕ್ಷಣ ಮಟ್ಟವೂ ಬಹಳ ಚೆನ್ನಾಗಿದೆ' ಎನ್ನುವ ದೆಬೋರ, ಕಾಲೇಜು ಮುಗಿದ ಮೇಲೆ ಇಲ್ಲಿಯೇ ಉದ್ಯೋಗವನ್ನೂ ಹುಡುಕಿ ನೆಲೆ ನಿಲ್ಲುವ ಯೋಚನೆಯಲ್ಲಿದ್ದಾರೆ.

ನೈಜೀರಿಯಾ ಪಶ್ಚಿಮ ಆಫ್ರಿಕಾ ಭಾಗದಲ್ಲಿ ಬರುವ ಒಂದು ದೇಶ. ನೈಜರ್ ಎಂಬ ನದಿ ಈ ದೇಶದೊಳಗೆ ಹರಿಯುವುದರಿಂದ ಇಲ್ಲಿಗೆ ನೈಜೀರಿಯಾ ಎಂಬ ಹೆಸರು ಬಂತು. ಬ್ರಿಟನ್‌ನ ಪತ್ರಕರ್ತ ಫ್ಲೋರ ಶಾ ಎಂಬಾತ 19ನೇ ಶತಮಾನದಲ್ಲಿ ಈ ಊರಿಗೆ ನೈಜೀರಿಯಾ ಎಂದು ಹೆಸರಿಸಿದ ಎನ್ನುತ್ತದೆ ಇತಿಹಾಸ. ಎರಡು ಬಣ್ಣಗಳ ಧ್ವಜವನ್ನು ಹೊಂದಿರುವ ನೈಜೀರಿಯಾದ್ದು ರಾಷ್ಟ್ರೀಯ ಕ್ರೀಡೆ ಫುಟ್ಬಾಲ್. ಇದೊಂದು ಫೆಡರಲ್ ರಿಪಬ್ಲಿಕ್ ದೇಶವಾದರೂ ಇಲ್ಲಿ ಮಿಲಿಟರಿ ಆಡಳಿತ ಬಹಳ ವರ್ಷ ಕಾಲ ಅಸ್ತಿತ್ವದಲ್ಲಿತ್ತು. ಜನರ ಸ್ವಭಾವ, ಮನೋಭಾವ ಸಾತ್ವಿಕತೆಯಿಂದ ಕೂಡಿಲ್ಲ. ಹೀಗಾಗಿ ಈ ನಾಡಿನಲ್ಲಿ ಹಿಂಸಾಚಾರವೇ ಹೆಚ್ಚು. ಸಣ್ಣ ಪುಟ್ಟ ವಿಷಯಗಳಿಗೆಲ್ಲ ಮುಷ್ಕರ, ಬಂದ್, ದೊಂಬಿ ಗಲಾಟೆ ನಡೆಸುವ ಇಲ್ಲಿನ ಮಂದಿಯ ನಡವಳಿಕೆ ದೆಬೋರಗೆ ಬೇಸರ ತಂದಿದೆಯಂತೆ. ಹಾಗಾಗಿ ಇಲ್ಲಿನ ನೆಮ್ಮದಿಯ ಜೀವನ, ಸ್ನೇಹಮಯ ವಾತಾವರಣ ಈಕೆಗೆ ಖುಷಿ ತಂದಿದೆಯಂತೆ.

'ಹಬ್ಬಗಳ ಆಚರಣೆ ಬಗ್ಗೆ ನನಗೆ ವಿಶೇಷ ಆಸಕ್ತಿ ಇಲ್ಲ. ನೈಜೀರಿಯಾದಲ್ಲಿ ಕ್ರಿಶ್ಚಿಯನ್ ಮತ್ತು ಇಸ್ಲಾಂ ಎರಡೂ ಧರ್ಮದ ಜನರಿದ್ದಾರೆ. ಆಯಾಯ ಧರ್ಮೀಯರು ಚರ್ಚ್‌ಗೆ, ಮಸೀದಿಗೆ ಹೋಗಿ ಪೂಜೆ ಸಲ್ಲಿಸುವ ಪದ್ಧತಿ ಇದೆ. ಆದರೆ ನಾನು ಇಲ್ಲಿ ಧಾರ್ಮಿಕತೆ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿಲ್ಲ. ಪೂಜೆ, ಪುನಸ್ಕಾರದ ಬಗ್ಗೆಯೂ ಅಷ್ಟೆ' ಎಂದು ಹೇಳುತ್ತಾರೆ ದೆಬೋರ.

'ಇಲ್ಲಿನ ಊಟ ತಿಂಡಿಗಳೆಲ್ಲ ಬಹಳ ರುಚಿಯಾಗಿರುತ್ತದೆ. ರೆಡಿ ಟು ಈಟ್ ಪರಾಟಗಳನ್ನು ತಂದು ಬಿಸಿ ಮಾಡಿಕೊಂಡು ಮನೆಯಲ್ಲಿ ತಿನ್ನುತ್ತೇವೆ. ಇದರ ಜತೆಗೆ ಬೇಯಿಸಿದ ಮೊಟ್ಟೆಗೆ ಮಸಾಲೆ ಹಾಕಿ ತಿಂದರೆ ಒಳ್ಳೆಯ ಕಾಂಬಿನೇಷನ್. ಚಿಕನ್ ತಂದೂರಿ, ಕಬಾಬ್, ಮಟನ್ ಸಾರು ಬಹಳ ಇಷ್ಟಪಟ್ಟು ತಿನ್ನುತ್ತೇವೆ. ನನ್ನ ರೂಂ ಮೇಟ್ಸ್ ಕೂಡ ನೈಜೀರಿಯಾದವರೇ ಆಗಿರುವುದರಿಂದ ನಾನು ಊರು ಬಿಟ್ಟು ಇಷ್ಟು ದೂರ ಬಂದಿದ್ದೇನೆ ಎಂಬ ಭಾವನೆಯೇ ಇಲ್ಲ, ಬೇಜಾರೂ ಇಲ್ಲ. ಕ್ಲಾಸ್‌ನಲ್ಲಿ ಕೂಡ ಬಹುಪಾಲು ಮಂದಿ ನಮ್ಮ ಊರಿನವರೇ ಆಗಿರುವುದರಿಂದ ಹೋಮ್‌ಲೀ ವಾತಾವರಣ ಇದೆ. ಇದೇ ನನಗೆ ಸಮಾಧಾನ, ತೃಪ್ತಿ ತಂದಿದೆ' ಎಂದೂ ಹೇಳುತ್ತಾರೆ ಈ ನೈಜೀರಿಯಾ ವಿದ್ಯಾರ್ಥಿನಿ.

★ **ಅವನೀಶ್**